# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 10.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ತಾರಾ ಕೋಂ ಮೋಹನ್ ಕುಮಾರ್<br>34 ವರ್ಷ<br>ಗೃಹಿಣಿ<br>ರಾಮೇನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ಪ್ರತಿ ವಾದಿ ಪರ ವಕೀಲರಾದ ಶ್ರೀ ಕೆ ಅರ್ ಪಿ ರವರಿಂದ

. ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಿರಿ ಎಂದರೆ ಸಾಕ್ಷಿಯು ದ್ವಿತೀಯ ಪಿ ಯು ಸಿ ವರೆಗೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಸ.ನಂಬರ್ ಏನು ಎಂದರೆ ಸಾಕ್ಷಿಯು ಸ.ನಂ.10/1ಎ ರಲ್ಲಿನ 6 ಎಕರೆ ಜಮೀನು ಎಂದು ನುಡಿಯುತ್ತಾರೆ. ಈ ಮೇಲ್ಕಂಡ ಸ.ನಂಬರ್ ನಲ್ಲಿ ಮೊದಲು 7 ಎಕರೆ ಜಮೀನು ಇತ್ತು ಎಂದರೆ ಸರಿ. ನಿಮ್ಮ ತಂದೆಯ ಅಕ್ಕ ತಂಗಿಯರು ಮತ್ತು ಒಟ್ಟು ಕುಟುಂಬದಲ್ಲಿ ಇದ್ದಾಗ ದಾವಾ ಅನುಸೂಚಿ ಸ್ವತ್ತನ್ನು ಒಳಗೊಂಡಂತೆ ಬೇರೆ ಆಸ್ತಿಗಳು ಕೂಡ ಒಟ್ಟು ಕುಟುಂಬಕ್ಕೆ ಇದ್ದವು ಎಂದರೆ ಸರಿ. ನಿಮ್ಮ ತಂದೆಯ ತಂಗಿ ಗಂಗಮ್ಮ ಎಂದರೆ ಸರಿ ಅವರು ಇದೇ ನ್ಯಾಯಾಲಯದಲ್ಲಿ ವಿಭಾಗ ಕೋರಿ ಅಸಲು ದಾವಾ 80/2010 ಅನ್ನು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವಾದಲ್ಲಿ ನಿಮ್ಮ ತಂದೆ ಗಂಗಮ್ಮ ಮತ್ತು ನಿಮ್ಮ ತಂದೆಯ ಅಕ್ಕ ತಂಗಿಯರು ಭಾಗ ಮಾಡಿಕೊಂಡು ಈ ಮೇಲ್ಕಂಡ ಸ.ನಂಬರ್ ನ 7 ಎಕರೆ ಪೈಕಿ 1 ಎಕರೆ ಜಮೀನನ್ನು ಸದರಿ ಗಂಗಮ್ಮ

ರವರಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇನ್ನು ಉಳಿಕೆ 6 ಎಕರೆ ನಿಮ್ಮ ತಂದೆಗೆ ಬಂದಿರುತ್ತದೆ ಎಂದರೆ ಸರಿ. ನಿಮ್ಮ ತಂದೆ ಗೊರವಯ್ಯನವರಿಗೆ ನಿಮ್ಮ ತಾಯಿ ಮತ್ತು ನಿಮ್ಮ ಚಿಕ್ಕಮ್ಮನಾದ ಪದ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ನಿಮ್ಮ ತಾಯಿ ಪುಷ್ಪಲತಾ ರವರಿಗೆ 3 ನೇ ಪ್ರತಿವಾದಿ ಮಧು ಮತ್ತು ನೀವು ಇಬ್ಬರು ಮಕ್ಕಳು ಎಂದರೆ ಸರಿ. ನಿಮ್ಮ ತಾಯಿಗೆ ಆರೋಗ್ಯ ಸರಿ ಇಲ್ಲದೇ ಇದ್ದ ಕಾರಣ ನಿಮ್ಮ ತಾಯಿಯೇ ಮುಂದೆ ನಿಂತು ನಿಮ್ಮ ತಂದೆಗೆ ಎರಡನೇ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆಯ ಎರಡನೇ ಹೆಂಡತಿ ಪದ್ಮಾರವರಿಗೆ 4 ಮತ್ತು 5 ನೇ ಪ್ರತಿವಾದಿಯರಾದ ಲಕ್ಷ್ಮೀ ಮತ್ತು ಮಣಿಕಂಠ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನಿಮ್ಮ ತಂದೆಗೆ ಈ ಮೇಲ್ಕಂಡ ದಾವಾದಲ್ಲಿ ಬಂದಂತಹ 6 ಎಕರೆ ಜಮೀನಿನ ಪೈಕಿ 3 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 17.11.2011 ರಂದು ನೀವು 3 ರಿಂದ 5 ನೇ ಪ್ರತಿವಾದಿಯರು ಮತ್ತು ನಿಮ್ಮ ತಂದೆ ಸೇರಿ ಸಹಿ ಮಾಡಿ ಕ್ರಯದಾರರಿಗೆ ಕರಾರು ಪತ್ರ ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಮದುವೆಯ ಖರ್ಚಿಗೋಸ್ಕರ ಸದರಿ 3 ಜಮೀನನ್ನು ಮಾರಾಟ ಮಾಡಲು ಎಲ್ಲರೂ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಮಾರಾಟ ಕ್ರಯದಾರರಿಂದ 18,66,000/- ಗಳಿಗೆ ಕ್ರಯ ಒಪ್ಪಂದ ಮಾಡಿಕೊಂಡು ಮುಂಗಡವಾಗಿ 5 ಲಕ್ಷ ಹಣವನ್ನು ಒಂದು ಕಂತಿನಲ್ಲಿ ಪಡೆದುಕೊಂಡು ಕರಾರು ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ದಿಃ 22.11.2011 ರಂದು ಪುನಃ 5 ಲಕ್ಷ ಹಣವನ್ನು ಎರಡನೇ ಕಂತಿನಲ್ಲಿ ಪಡೆದುಕೊಂಡಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಕರಾರು ಪತ್ರದಲ್ಲಿನ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಸದರಿ ಪತ್ರದಲ್ಲಿನ ಸಹಿ ನಿಮ್ಮದು ಎಂದರೆ ಸಾಕ್ಷಿಯು ನಾನು ಮಾಡಿಲ್ಲ ಎಂದು ನುಡಿಯುತ್ತಾರೆ.

2. ನಿಮ್ಮ ಮನೆಯ ಒಟ್ಟು ಕುಟುಂಬದ ಅವಶ್ಯಕತೆಗೋಸ್ಕರ ಮತ್ತು ನಿಮ್ಮ ಮದುವೆ ಮಾಡಲು ಮಾಡಿದ ಸಾಲವನ್ನು ತೀರಿಸುವ ಸಲುವಾಗಿ ಒಟ್ಟು ಕುಟುಂಬದವರೆಲ್ಲ ಚಿಕ್ಕಮಲ್ಲಪ್ಪರವರ ಮಗ ಶಿವಾನಂದ್ ರವರಿಗೆ 3 ಎಕರೆ ಮಾರಾಟ ಮಾಡಲು ನೀವು ತೀರ್ಮಾನ ಮಾಡಿದ್ದಿರಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಉತ್ತರದ 3

ಎಕರೆ ಆಸ್ತಿಯನ್ನು ಶಿವಾನಂದ್ ರವರಿಗೆ ಮಾರಾಟ ಮಾಡಲು ನೀವು ಒಪ್ಪಿಕೊಂಡಿದ್ದಿರಿ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ನಿಮ್ಮ ಊರಿನ ಚಿಕ್ಕಯ್ಯ ಮತ್ತು ಸಿದ್ದರಾಜು ರವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಕ್ರಯ ಪತ್ರವನ್ನು ಕೂಡ ನೊಂದಣಿ ಮಾಡಿಕೊಟ್ಟಿದ್ದಿರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವಾನಂದ್ ರವರಿಗೆ ಮಾರಾಟ ಮಾಡಿರುವ 3 ಎಕರೆ ಜಮೀನಿನಲ್ಲಿ ನಿಮಗೆ ಯಾವುದೇ ಹಕ್ಕು, ಅಧಿಕಾರ, ಭಾಗಂಶ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 3 ಎಕರೆ ಪೈಕಿ ನಿಮಗೆ ಮತ್ತು 3 ನೇ ಪ್ರತಿವಾದಿಗೆ 1 ಎಕರೆ 20 ಗುಂಟೆ ಮತ್ತು 4 ಮತ್ತು 5 ನೇ ಪ್ರತಿವಾದಿಗಳಿಗೆ 1 ಎಕರೆ 20 ಗುಂಟೆ ಜಮೀನನ್ನು ದಿಃ 17.11.2011 ರ ಪಾರಿಕತ್ತಿನ ಮೂಲಕ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನಿಮ್ಮ ತಂದೆ ನಿಮಗೆ ಒಡವೆ ವಸ್ತುಗಳನ್ನು ನೀಡಿ ತುಮಕೂರಿನ ಪೋಲೀಸ್ ಸಮುದಾಯ ಭವನದಲ್ಲಿ ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಶಿವಾನಂದ್ ರವರಿಗೆ ಕ್ರಯ ಪತ್ರ ಮಾಡುವಾಗ ಬಂದು ಸಹಿ ಮಾಡುವಂತೆ ನಿಮ್ಮನ್ನು ಕೇಳಿದಾಗ ನೀವು ಒಪ್ಪಿ ಸಹಿ ಮಾಡಿರುವುದಿಲ್ಲ ಎಂದರೆ ನಾನು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ನಿಮ್ಮ ತಂದೆ ಭಾಗ ನೀಡಲು ನಿಮ್ಮನ್ನು ಕರೆದರೂ ಕೂಡ ನೀವು ಅವರಿಗೆ ಸರಿಯಾಗಿ ಸ್ಪಂದಿಸದೇ ಈ ದಾವಾ ಸಲ್ಲಿಸಿ ಅವರಿಗೆ ತೊಂದರೆ ನೀಡುತ್ತಾ ಬಂದಿದ್ದಿರಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ.ನಂ.10/1 ಎ ರಲ್ಲಿ ಈಗ ಕೇವಲ 3 ಎಕರೆ ಮಾತ್ರ ಜಮೀನು ಇದ್ದು, ನಿಮ್ಮ ತಂದೆ ಸದರಿ 3 ಎಕರೆ ಜಮೀನಿನಲ್ಲಿ ಈಗಲೂ ನಿಮಗೆ ಭಾಗ ನೀಡಲು ತಯಾರಿದ್ದಾರೆ ಎಂದರೆ ಸಾಕ್ಷಿಯು ಮೊದಲು ಭಾಗ ನೀಡುವುದಿಲ್ಲ ಎಂದು ಹೇಳಿದ್ದರು, ಈಗ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ನಿಮ್ಮ ಚಿಕ್ಕಮ್ಮ ಮತ್ತು ಅವರ ಮಕ್ಕಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(7 ನೇ ಪ್ರತಿವಾದಿಯ ಪರ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು)**

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.